2 ● RF(A)/100/3317

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]

Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]

Total No. of Questions : 47 ]

**ಸಂಕೇತ ಸಂಖ್ಯೆ : 95-K**

**Code No. : 95-K**

**A**

**CCE RF**
**UNREVISED**
**FULL SYLLABUS**

**Question Paper Serial No. 100**

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

# ವಿಷಯ : ಸಮಾಜಶಾಸ್ತ್ರ

# Subject : SOCIOLOGY

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಅಭ್ಯರ್ಥಿ / Regular Fresh)**

ದಿನಾಂಕ : 03. 04. 2023 ] [ Date : 03. 04. 2023

ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] [ Time : 10-30 A.M. to 1-45 P.M.

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 47 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

[ Turn over

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :**

**10 × 1 = 10**

1. ರಾಷ್ಟ್ರದ ಪ್ರಜೆಗಳು ವಿದ್ಯಾವಂತರಾಗಿದ್ದರೆ

   (A) ಆ ರಾಷ್ಟ್ರದ ಅನಕ್ಷರತೆ ಹೆಚ್ಚಾಗುತ್ತದೆ

   (B) ಆ ರಾಷ್ಟ್ರದ ಪ್ರಜಾಪ್ರಭುತ್ವ ಫಲಕಾರಿಯಾಗುತ್ತದೆ

   (C) ನಿರುದ್ಯೋಗ ಸಮಸ್ಯೆ ಪರಿಹಾರವಾಗುವುದಿಲ್ಲ

   (D) ಹಣಕಾಸಿನ ಸಂಸ್ಥೆಯ ಅವಶ್ಯಕತೆ ಇರುವುದಿಲ್ಲ

2. ಅಸ್ಪೃಶ್ಯತೆ ಆಚರಣೆ ಶಾಪವೆಂದು ಸಾರಿದವರು

   (A) ಮಹಾತ್ಮಾ ಗಾಂಧಿ

   (B) ಬಸವೇಶ್ವರ

   (C) ಬಾಬಾ ಸಾಹೇಬ್ ಅಂಬೇಡ್ಕರ್

   (D) ರಾಜಾ ರಾಮ್‌ಮೋಹನ್ ರಾಯ್

3. ಭಾರತೀಯ ಸಮಾಜದ ಅವಿಭಾಜ್ಯ ಅಂಗ

(A) ಆರ್ಥಿಕ ಸಮಾನತೆ

(B) ಗಣತಂತ್ರ

(C) ಜಾತ್ಯಾತೀತತೆ

(D) ಜಾತಿ ಪದ್ಧತಿ

4. 'ವೇದಗಳಿಗೆ ಹಿಂತಿರುಗಿ' ಎಂದು ಕರೆ ನೀಡಿದವರು

(A) ರಾಜಾ ರಾಮ್‌ಮೋಹನ್ ರಾಯ್

(B) ದಯಾನಂದ ಸರಸ್ವತಿ

(C) ಜ್ಯೋತಿರಾವ್ ಫುಲೆ

(D) ಆತ್ಮಾರಾಂ ಪಾಂಡುರಂಗ

5. ಭಾರತದ ಮೊದಲ ಶಿಕ್ಷಕಿ

(A) ಸಾವಿತ್ರಿಬಾಯಿ ಫುಲೆ

(B) ನಿವೇದಿತಾ

(C) ಆ್ಯನಿ ಬೆಸೆಂಟ್

(D) ಸರೋಜಿನಿ ನಾಯ್ಡು

6. ಎಸ್.ಎನ್. ಡಿ.ಟಿ. ಮಹಿಳಾ ವಿಶ್ವವಿದ್ಯಾಲಯವನ್ನು ಮಹರ್ಷಿ ಕರ್ವೆರವರು ಸ್ಥಾಪಿಸಿದ್ದು

(A) ಮುಂಬೈನಲ್ಲಿ

(B) ಬರೋಡಾದಲ್ಲಿ

(C) ಗ್ವಾಲಿಯರ್‌ನಲ್ಲಿ

(D) ಪುಣೆಯಲ್ಲಿ

7. ಹೊಂ ರೂಲ್ ಚಳವಳಿಯು 1917 ರಲ್ಲಿ ಮೊದಲಿಗಿಂತ ಹತ್ತರಷ್ಟು ಬಲವಾಗಲು ಕಾರಣ

(A) ಸ್ತ್ರೀಯರು ಭಾಗಿಗಳಾಗಿದ್ದು

(B) ಮಹಾತ್ಮ ಗಾಂಧಿ ಸತ್ಯಾಗ್ರಹ ಕೈಗೊಂಡಿದ್ದು

(C) ಬಾಲಗಂಗಾಧರ್ ತಿಲಕ್ ಪತ್ರಿಕೆ ಪ್ರಕಟಿಸಿದ್ದು

(D) ಮೊದಲ ದುಂಡು ಮೇಜಿನ ಸಭೆಯ ವೈಫಲ್ಯ

8. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಬೆಂಬಲ ಸೂಚಿಸಿದ್ದ ಬ್ರಿಟಿಷ್ ವೈಸ್‌ರಾಯ್

(A) ಡಾಲ್‌ಹೌಸಿ

(B) ವಾರನ್ ಹೇಸ್ಟಿಂಗ್ಸ್

(C) ಮೌಂಟ್ ಬ್ಯಾಟನ್

(D) ಕ್ಯಾನಿಂಗ್

9. ಒಂದು ಪ್ರದೇಶದ ಮೂಲ ನಿವಾಸಿಗಳೆ

(A) ಸಮುದಾಯ

(B) ಸಮಾಜ

(C) ಕುಟುಂಬ

(D) ಆದಿವಾಸಿಗಳು

10. ಹರಿಜನರು ಮತ್ತು ಗಿರಿಜನರು ಎಂಬ ಪದಗಳನ್ನು ಮೊದಲು ಬಳಸಿದವರು

(A) ಮೋತಿಲಾಲ್ ನೆಹರೂರವರು

(B) ಬಾಬಾ ಸಾಹೇಬ್ ಅಂಬೇಡ್ಕರ್‌ರವರು

(C) ಮಹಾತ್ಮ ಗಾಂಧೀಜಿರವರು

(D) ಬಾಬಾ ಆಮ್ಟೆರವರು

**II.** 11. ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :** **5 × 1 = 5**

| ***A*-ಪಟ್ಟಿ** | | ***B*-ಪಟ್ಟಿ** | |
|---|---|---|---|
| (A) | ಬ್ರಹ್ಮ ಸಮಾಜ | (i) | ದಯಾನಂದ ಸರಸ್ವತಿ |
| (B) | ಆರ್ಯ ಸಮಾಜ | (ii) | ರಾಜಾ ರಾಮ್‌ಮೋಹನ್ ರಾಯ್ |
| (C) | ಸತ್ಯಶೋಧಕ ಸಮಾಜ | (iii) | ಆತ್ಮರಾಮ ಪಾಂಡುರಂಗ |
| (D) | ಬರ್ದೋಲಿ ಸತ್ಯಾಗ್ರಹ | (iv) | ಬಾಲಗಂಗಾಧರ್ ತಿಲಕ್ |
| (E) | ಖೇಡ ಸತ್ಯಾಗ್ರಹ | (v) | ಸರ್ದಾರ್ ವಲ್ಲಭಭಾಯಿ ಪಟೇಲ್ |
| | | (vi) | ಮಹಾತ್ಮಾ ಗಾಂಧಿ |
| | | (vii) | ಜ್ಯೋತಿರಾವ್ ಫುಲೆ |

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ಪದ / ವಾಕ್ಯದಲ್ಲಿ ಉತ್ತರ ಬರೆಯಿರಿ : 15 × 1 = 15**

12. ಕೈಗಾರಿಕೀಕರಣ ಎಂದರೇನು ?

13. ಕಿಂಗ್ಸ್‌ಲೇ ಡೇವಿಡ್ ಪ್ರಕಾರ ಸಾಮಾಜಿಕ ಬದಲಾವಣೆಯನ್ನು ವ್ಯಾಖ್ಯಾನಿಸಿ.

14. ಪಕ್ಕಾ ಆಹಾರ ಎಂದರೇನು ?

15. ಜಾತಿ ಪದದ ಉಗಮವನ್ನು ತಿಳಿಸಿ.

16. ಆರ್ಥಿಕ ಅಸಮತೋಲನ ಎಂದರೇನು ?

17. ಕ್ರಾಂತಿಕಾರಿ ಚಳವಳಿ ಎಂದರೇನು ?

18. ಪ್ರಾರ್ಥನಾ ಸಮಾಜದ ಸ್ಥಾಪಕರು ಯಾರು ?

19. ಸತಿ ಸಹಗಮನ ಎಂದರೇನು ?

20. ಭಾರತದ ಮೊದಲ ಮಹಿಳಾ ರಾಷ್ಟ್ರಪತಿ ಯಾರು ?

21. ಬುಡಕಟ್ಟು ಎಂದರೇನು ?

22. ಗಿಡಮೂಲಿಕೆಯ ಔಷಧಿಗಳ ತಯಾರಿಕೆಯಲ್ಲಿ ಪ್ರಾವೀಣ್ಯತೆಯನ್ನು ಪಡೆದವರು ಯಾರು ?

23. ಬುಡಕಟ್ಟು ಸಮುದಾಯಗಳಲ್ಲಿ ಮಕ್ಕಳು ಶಾಲೆಗ ಹೋಗುವವರ ಸಂಖ್ಯೆ ಕಡಿಮೆ ಏಕೆ ?

24. ಬ್ಲಾಕ್ ಪದ್ಧತಿ ಎಂದರೇನು ?

25. ವಯಸ್ಕರ ಶಿಕ್ಷಣ ಎಂದರೇನು ?

26. ಕೇಸರಿ ಪತ್ರಿಕೆಯನ್ನು ಪ್ರಕಟಿಸಿದವರು ಯಾರು ?

**IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**14 × 2 = 28**

27. ಸಾಮಾಜಿಕ ಬದಲಾವಣೆ ತರುವಲ್ಲಿ ಶಿಕ್ಷಣದ ಪಾತ್ರವೇನು ?

28. ಅನಿಯೋಜಿತ ಸಾಮಾಜಿಕ ಬದಲಾವಣೆಯನ್ನು ಉದಾಹರಣೆಗಳೊಂದಿಗೆ ವಿವರಿಸಿ.

29. ಮಾನವ ಸಂಬಂಧ ಬದಲಾವಣೆ ಸಾಮಾಜಿಕ ಬದಲಾವಣೆಯನ್ನು ಹೇಗೆ ತರುತ್ತದೆ ?

30. ಅನಕ್ಷರತೆಯು ಸಾಮಾಜಿಕ ಬದಲಾವಣೆಗೆ ಅಡ್ಡಿಯಾಗಿದೆ. ಹೇಗೆ ?

31. ಆರ್ಥಿಕ ಸಂಕಷ್ಟದಲ್ಲಿರುವವರು ಸಾಮಾಜಿಕ ಬದಲಾವಣೆಯನ್ನು ವಿರೋಧಿಸುತ್ತಾರೆ. ಏಕೆ ?

32. ಜಾತಿ ಪದವನ್ನು ಅರ್ಥೈಸಿ.

33. ಭಾರತದಲ್ಲಿನ ಪ್ರಮುಖ ಸಾಮಾಜಿಕ ಚಳವಳಿಗಳ ವಿಧಗಳನ್ನು ತಿಳಿಸಿ.

34. ಸಾಮಾಜಿಕ ಚಳವಳಿಯ ಉದ್ದೇಶಗಳು ಯಾವುವು ?

35. ಸಮಾಜ ಸುಧಾರಣೆಯಲ್ಲಿ ಕಬೀರ್ ಪಂಥದ ಪ್ರಮುಖ ಅಂಶಗಳನ್ನು ತಿಳಿಸಿ.

36. ಬ್ರಿಟಿಷರ ಆಳ್ವಿಕೆಯ ಸಮಯದಲ್ಲಿ ಜಾರಿಗೆ ತರಲಾದ ವಿವಾಹಕ್ಕೆ ಸಂಬಂಧಪಟ್ಟ ಕಾನೂನುಗಳನ್ನು ಹೆಸರಿಸಿ.

37. ಬುಡಕಟ್ಟುಗಳ ಅಭಿವೃದ್ಧಿಗೆ ಭಾರತ ಸರ್ಕಾರ ರೂಪಿಸಿರುವ ಮೂರು ನೀತಿಗಳನ್ನು ಹೆಸರಿಸಿ.

38. ಬುಡಕಟ್ಟು ಸಲಹಾ ಸಮಿತಿಯ ಕಾರ್ಯಗಳೇನು ?

39. ಸಮೂಹ ಮಾಧ್ಯಮದ ಎರಡು ಪ್ರಕಾರಗಳನ್ನು ಉದಾಹರಣೆಗಳೊಂದಿಗೆ ತಿಳಿಸಿ.

40. ಆಧುನಿಕ ಜೀವನದಲ್ಲಿ ಗಣಕಯಂತ್ರದ ಉಪಯುಕ್ತತೆಯನ್ನು ತಿಳಿಸಿ.

**V. ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**6 × 3 = 18**

41. ತಂತ್ರಜ್ಞಾನದಲ್ಲಿ ಪ್ರಗತಿಯಾದಂತೆ ಸಮಾಜದಲ್ಲಿ ಆಗುವ ಬದಲಾವಣೆಗಳೇನು ?

42. ಸಾಮಾಜಿಕ ಬದಲಾವಣೆಗೆ ಜಾತಿ ಹೇಗೆ ಅಡ್ಡಿಯಾಗಿದೆ ವಿವರಿಸಿ.

43. ಬಂಡಾಯಗಳ ಸ್ವರೂಪವೇನು ?

44. 19 ನೆ ಮತ್ತು 20 ನೆ ಶತಮಾನದ ಭಾರತೀಯ ಮಹಿಳೆಯ ಸ್ಥಾನಮಾನದ ಬಗ್ಗೆ ಬರೆಯಿರಿ.

45. ಭಾರತದ ಬುಡಕಟ್ಟು ಜನಾಂಗಗಳ ಐತಿಹಾಸಿಕ ಹಿನ್ನೆಲೆಯ ಬಗ್ಗೆ ಬರೆಯಿರಿ.

46. ಚಲನಚಿತ್ರಗಳು ಸಾಮಾಜಿಕ ಮೌಲ್ಯಗಳನ್ನು ಹೇಗೆ ಪ್ರತಿಬಿಂಬಿಸುತ್ತವೆ ?

**VI. ಈ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : $1 \times 4 = 4$**

47. ಆರ್ಥಿಕ ಹಾಗೂ ಸಾಮಾಜಿಕ ಪ್ರಗತಿಯಲ್ಲಿ ನಗರ ಹಾಗೂ ಗ್ರಾಮೀಣ ಪ್ರದೇಶಗಳಿಗಿರುವ ಅಸಮಾನತೆಗಳೇನು ?